**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ.51/2015</u>**

**ದಿನಾಂಕಃ 09.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಓಂಕಾರಪ್ಪ | ಚಾಸಾ-6, ಪ್ರಾಸ.-5 |
| ತಂದೆಯ ಹೆಸರು | ಃ | ಕಪ್ಪಣ್ಣ | |
| ವಯಸ್ಸು | ಃ | 59 ವರ್ಷ | |
| ಉದ್ಯೋಗ | ಃ | ವ್ಯವಸಾಯ | |
| ವಾಸ | ಃ | ಚಿಕ್ಕಬಾಸೂರು | |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಆರೋಪಿತರು ಗೊತ್ತು. ಹಲವಾರು ವರ್ಷಗಳ ಹಿಂದೆ ಪೋಲಿಸರು ಮೆಸ್ಕಾಂ ಕಛೇರಿಯಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ಸದರಿ ಮಹಜರನ್ನು 1.00 ರಿಂದ 3.00 ಗಂಟೆವರೆಗೆ ಮಾಡಿರುತ್ತಾರೆ. ನಿಪಿ-9 ಮತ್ತು 10 ರಲ್ಲಿ ನಾನು ಇದ್ದೇನೆ. ಎರಡು ಅರ್ಜಿಗಳನ್ನು ಪೋಲಿಸರಿಗೆ ನೀಡಿರುತ್ತಾರೆ ಆದರೆ ಯಾರು ನೀಡಿರುತ್ತಾರೆ ಎಂದು ನೆನಪಿರುವುದಿಲ್ಲ. ಸಾಕ್ಷಿಯು ಮತ್ತೊಂದು ಮಹಜರ್ ನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು, ಸಾಕ್ಷಿ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಮಲ್ಲಪ್ಪರವರ ಸಹಿಗಳನ್ನು ಪೋಲಿಸರು ಪಡೆದುಕೊಂಡು ಮಹಜರ್ ತಯಾರಿಸಿರುತ್ತಾರೆ. ನನ್ನೊಂದಿಗೆ ಚಾಸಾ-7 ರವರು ಸಹಿ ಮಾಡಿರುತ್ತಾರೆ. ಸಾಕ್ಷಿಯು ಮಲ್ಲಪ್ಪರವರು ಆದಿನ 6 ಪುಟಗಳಲ್ಲಿ ತಮ್ಮ ಮಾದರಿ ಸಹಿಗಳನ್ನು ಮಾಡಿರುತ್ತಾರೆ, ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-12, 12(ಎ) ರಿಂದ 17(ಎ) ಎಂದು ಗುರುತಿಸಲಾಯಿತು. ಮಹಜರನ್ನು ಮಧ್ಯಾಹ್ನ 1.00 ರಿಂದ 3.00 ಗಂಟೆವೆರೆಗೆ ಮಾಡಿರುತ್ತಾರೆ. ಸಹಿಗಳು ಫೋರ್ಜರಿಯಾಗಿವೆ ಎಂಬ ಕಾರಣಕ್ಕಾಗಿ ಪೋಲಿಸರು ಚಾಸಾ-1 ರವರ ಮಾದರಿ ಸಹಿಗಳನ್ನು ಪಡೆದುಕೊಂಡಿರುತ್ತಾರೆ.

**<u>ಪಾಟೀಸವಾಲುಃ ಶ್ರೀ ಬಿ ಆರ್ ಆರೋಪಿ ಪರ ವಕೀಲರಿಂದಃ</u>**

ಪೋಲಿಸರು ನನಗೆ ನೋಟಿಸು ನೀಡಿರುವುದಿಲ್ಲ. ಚಾಸಾ-1 ರವರು ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ನಾವು 5 ರಿಂದ 6 ಜನ ಠಾಣೆಗೆ ಹೋಗಿದ್ದೆವು. ನಿಖರ ದಿನಾಂಕ ನೆನಪಿರುವುದಿಲ್ಲ. ಚಾಸಾ-1 ಮತ್ತು 4 ರವರು ಸಹಿಗಳು ಫೋರ್ಜರಿ ಆಗಿದೆ ಆದ್ದರಿಂದ ಠಾಣೆಗೆ

ಹೋಗಬೇಕು ಎಂದು ತಿಳಿಸಿರುತ್ತಾರೆ. ನಿಪಿ-11 ಕ್ಕೆ ನಾನು ಮತ್ತು ಹನುಮಂತಪ್ಪ ಸಹಿ ಮಾಡಿರುತ್ತೇವೆ, ಸಹಿ ಮಾಡಿದ ಉಳಿದ ವ್ಯಕ್ತಿಗಳ ಹೆಸರು ತಿಳಿದಿರುವುದಿಲ್ಲ. ನಾನು ಅಂದಾಜು 4 ರಿಂದ 5 ಗಂಟೆ ಠಾಣೆಯಲ್ಲಿದ್ದೆ. ಮಲ್ಲಪ್ಪ ರವರ ಸಹಿಗಳನ್ನು 6 ಪುಟದಲ್ಲಿ ಪಡೆದುಕೊಂಡಿರುತ್ತಾರೆ, ಒಂದು ಪುಟದಲ್ಲಿ ಎಷ್ಟು ಸಹಿ ಪಡೆದಿರುತ್ತಾರೆ ಎಂದು ತಿಳಿದಿರುವುದಿಲ್ಲ. ಒಂದು ಪುಟದಲ್ಲಿ 6 ಸಹಿಗಳನ್ನು ಮಾಡಿರುತ್ತಾರೆ. ಸಹಿಗಳನ್ನು ಠಾಣೆಯಲ್ಲಿ ಪಡೆದಿರುತ್ತಾರೆ. ಯಾವ ಉದ್ದೇಶಕ್ಕಾಗಿ ಸಹಿ ಪಡೆಯಲಾಗುತ್ತಿದೆ ಎಂದು ಪೋಲಿಸರು ತಿಳಿಸಿರುವುದಿಲ್ಲ. ನಿಪಿ-11 ರಲ್ಲಿ ಪೋಲಿಸರು ಏನು ಬರೆದಿದ್ದಾರೆ ಎಂದು ತಿಳಿದಿರುವುದಿಲ್ಲ. ನಾನು ಸಹಿ ಮಾಡುವಾಗ ಬರವಣಿಗೆ ಆಗಿತ್ತು. ಮಲ್ಲಪ್ಪರವರು ಸಹಿಗಳನ್ನು ಮಾಡಿರುತ್ತಾರೆ ನಂತರ ನಾನು ಸಹಿ ಮಾಡಿರುತ್ತೇನೆ. ಮಲ್ಲಪ್ಪ ರವರು ಯಾವ ರೀತಿಯಲ್ಲಿ ಸಹಿ ಮಾಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಯಾವ ಬಣ್ಣದ ಶಾಯಿಯಲ್ಲಿ ಸಹಿ ಮಾಡಿರುತ್ತಾರೆ ಎಂದು ತಿಳಿದಿರುವುದಿಲ್ಲ. ನಾನು ಮತ್ತು ಚಾಸಾ-4 ವಿಶ್ವಾಸದಿಂದ ಇದ್ದೇವೆ. ಸದರಿ ವಿಶ್ವಾಸಕ್ಕಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಲ್ಲಪ್ಪ ರವರು ಯಾವುದೇ ದಾಖಲೆಗಳಿಗೆ ಮಾದರಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮಹಜರ್ ಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಮಲ್ಲಪ್ಪರವರು ಮಾಡಿದ್ದಾರೆ ಎಂದು ಹೇಳುವ ಮಾದರಿ ಸಹಿಗಳನ್ನು ನನಗೆ ಗುರುತಿಸಲು ಆಗುವುದಿಲ್ಲ. ನಾನು ಒಮ್ಮೆ ಮಾತ್ರ ಠಾಣೆಗೆ ಹೋಗಿರುತ್ತೇನೆ. ನಿಪಿ-9 ಮತ್ತು 10 ನ್ನು ಯಾವ ವಿಚಾರಕ್ಕಾಗಿ ಛಾಯಾಚಿತ್ರ ತೆಗೆದಿರುತ್ತಾರೆ ಎಂದು ತಿಳಿದಿರುವುದಿಲ್ಲ. ಛಾಯಾಚಿತ್ರ ತೆಗೆದ ದಿನಾಂಕ ನೆನಪಿರುವುದಿಲ್ಲ. ನಿಪಿ-9 ಮತ್ತು 10 ಛಾಯಾಚಿತ್ರ ತೆಗೆದ ದಿನ ನನ್ನ ಸಹಿ ಪಡೆದಿರುವುದಿಲ್ಲ. ನಿಪಿ-8 ಮತ್ತು 11 ರಲ್ಲಿ ಏನು ಬರೆದಿದೆ ಎಂದು ತಿಳಿದಿರುವುದಿಲ್ಲ. ನಾನು ಠಾಣೆಗೆ ಮತ್ತು ಮೆಸ್ಕಾಂ ಕಛೇರಿಗೆ ಹೋಗಿಲ್ಲ ಎಂದರೆ ಸರಿಯಲ್ಲ ಮತ್ತು ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.